**ಕರ್ನಾಟಕ ವಿಧಾನ ಪರಿಷತ್ತು**
**ಲಘು ಪ್ರಕಟಣೆ ಭಾಗ–2**
**(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**

**ಸೋಮವಾರ, ದಿನಾಂಕ: 04ನೇ ಜನವರಿ, 2021**

ಸಂಖ್ಯೆ:**02**

ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ದಿನಾಂಕ:15.12.2020ರಂದು ಸದನದಲ್ಲಿ ಮಾನ್ಯ ಉಪ ಸಭಾಪತಿಯವರು ಕೋರಂ ಬೆಲ್ ಚಾಲನೆಯಲ್ಲಿರುವಾಗಲೇ ನಿಯಮಬಾಹಿರವಾಗಿ ಸಭಾಪತಿಯವರ ಪೀಠವನ್ನು ಅಲಂಕರಿಸಿದ್ದು ಸೇರಿದಂತೆ ಆನಂತರದ ಬೆಳವಣಿಗೆಗಳಲ್ಲಿ ಸರ್ಕಾರ ಹಾಗೂ ವಿರೋಧ ಪಕ್ಷದ ಹಲವು ನಾಯಕರುಗಳು ನಡೆದುಕೊಂಡ ರೀತಿಯಿಂದ ಪೀಠ ಮತ್ತು ಈ ಸದನದ ಗೌರವ, ಘನತೆ ಮತ್ತು ಸತ್‌ಸಂಪ್ರದಾಯಕ್ಕೆ ಚ್ಯುತಿ ಉಂಟಾಗಿರುವುದರ ಕುರಿತು ಮಾಧ್ಯಮಗಳಲ್ಲಿಯೂ ಸಹ ವರದಿಯಾಗಿದ್ದು, ಕಾಂಗ್ರೆಸ್ ಮತ್ತು ಬಿ.ಜೆ.ಪಿ. ಪಕ್ಷದ ಶಾಸಕರಿಂದ ಸಹ ಲಿಖಿತ ದೂರು ಮತ್ತು ಪ್ರತಿ ದೂರುಗಳು ಸ್ವೀಕೃತಗೊಂಡಿವೆ. ಸದರಿ ದೂರು ಮನವಿಗಳಲ್ಲಿ ಅಂದು ನಡೆದ ಅಹಿತಕರ ಘಟನೆಗೆ ಕಾರಣಕರ್ತರಾದ ಸದನದ ಸದಸ್ಯರು, ವಿಧಾನ ಪರಿಷತ್ತಿನ ಅಧಿಕಾರಿ/ಸಿಬ್ಬಂದಿಗಳು, ಸಚಿವರು ಮತ್ತು ಇತರರ ಮೇಲೆ ಸೂಕ್ತ ಕ್ರಮ ಕೈಗೊಂಡು ಸದನದ ಹಾಗೂ ಪೀಠದ ಗೌರವವನ್ನು ಎತ್ತಿ ಹಿಡಿಯಬೇಕೆಂದು ಮನವಿ ಮಾಡಲಾಗಿದೆ.

ಈ ಹಿಂದೆ **ದಿನಾಂಕ:09.07.2010 & 11.10.2010ರಂದು ವಿಧಾನ ಸಭೆಯ ಸಭಾಂಗಣದಲ್ಲಿ** ನಡೆದಿದ್ದ ಇಂತಹದೇ ಅಹಿತಕರ ಘಟನೆಗಳ ಬಗ್ಗೆ ಅಂದಿನ ಸಭಾಧ್ಯಕ್ಷರು ಸದನ ಸಮಿತಿ ರಚಿಸಿ ವರದಿ ಪಡೆದಿರುವ ಪೂರ್ವ ನಿದರ್ಶನಗಳನ್ನು ಗಣನೆಗೆ ತೆಗೆದುಕೊಂಡು ವಿಧಾನ ಪರಿಷತ್ತಿನ ಸದನದಲ್ಲಿ ನಡೆದ ಅಹಿತಕರ ಘಟನೆಯ ಬಗ್ಗೆ ವಿಚಾರಣೆ ನಡೆಸಿ ವರದಿ ನೀಡಲು ಹಾಗೂ ಈ ಘಟನೆಗೆ ಕಾರಣಕರ್ತರಾದವರ ಮೇಲೆ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಶಿಫಾರಸ್ಸು ಮಾಡಲು ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 331 ಮತ್ತು 342ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಮತ್ತು ಮಾಜಿ ಉಪ ಸಭಾಪತಿಯವರಾದ **ಶ್ರೀ ಮರಿತಿಬ್ಬೇಗೌಡ,** ಇವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡ **ಸದನ ಸಮಿತಿಯನ್ನು** ಮಾನ್ಯ ಸಭಾಪತಿಯವರು ರಚಿಸಿರುತ್ತಾರೆ.

**ಶ್ರೀಯುತರುಗಳಾದ:**

1. **ಮರಿತಿಬ್ಬೇಗೌಡ – ಅಧ್ಯಕ್ಷರು**
2. **ಬಿ.ಕೆ. ಹರಿಪ್ರಸಾದ್ – ಸದಸ್ಯರು**
3. **ಅಡಗೂರು ಹೆಚ್. ವಿಶ್ವನಾಥ್ – ಸದಸ್ಯರು**
4. **ಆರ್.ಬಿ. ತಿಮ್ಮಾಪೂರ – ಸದಸ್ಯರು**
5. **ಎಸ್.ವಿ. ಸಂಕನೂರ – ಸದಸ್ಯರು**

---2

ಈ ಕೆಳಕಂಡ ಪರಿಶೀಲನಾಂಶಗಳ ಆಧಾರದಲ್ಲಿ ತನ್ನ ವರದಿಯನ್ನು ನೀಡಲು ಸಮಿತಿಗೆ ಇಪ್ಪತ್ತು ದಿನಗಳ ಕಾಲಾವಕಾಶವನ್ನು ನೀಡಲಾಗಿರುತ್ತದೆ.

ಪರಿಶೀಲನಾಂಶಗಳು

1. ದಿನಾಂಕ:15.12.2020ರಂದು ವಿಧಾನ ಪರಿಷತ್ ಸಭಾಂಗಣದಲ್ಲಿ ನಡೆದ ಅಹಿತಕರ ಘಟನೆಯಲ್ಲಿನ ನಿಯಮಬಾಹಿರ ಹಾಗೂ ಕಾನೂನುಬಾಹಿರ ವರ್ತನೆಯ ಅಂಶಗಳ ಬಗ್ಗೆ ಪರಿಶೀಲಿಸುವುದು.

2. ಘಟನೆಗೆ ಕಾರಣಕರ್ತರಾದ ಪರಿಷತ್ ಸಚಿವಾಲಯದ ಅಧಿಕಾರಿ/ಸಿಬ್ಬಂದಿಗಳು, ಭದ್ರತಾ ಸಿಬ್ಬಂದಿಗಳು, ಸದನದ ಸದಸ್ಯರು, ಸಚಿವರು ಹಾಗೂ ಇತರರ ಬಗ್ಗೆ ಪರಿಶೀಲಿಸುವುದು.

3. ಈ ಘಟನೆಯ ಸಂಬಂಧ ಕಾಂಗ್ರೆಸ್ ಮತ್ತು ಬಿ.ಜೆ.ಪಿ ಶಾಸಕರು ಮಾನ್ಯ ಸಭಾಪತಿಯವರಿಗೆ ಸಲ್ಲಿಸಿರುವ ದೂರು ಮನವಿಗಳು ಮತ್ತು ಅದರಲ್ಲಿನ ಅಂಶಗಳನ್ನು ಪರಿಶೀಲಿಸುವುದು.

4. ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು ಇವರಿಗೆ ಸಭಾಪತಿಯವರು ನೀಡಿರುವ ತೋರು ಕಾರಣ ಪತ್ರ ಮತ್ತು ಈ ಸಂಬಂಧ ಅವರು ನೀಡಿರುವ ಉತ್ತರವನ್ನು ಪರಿಶೀಲಿಸುವುದು.

5. ಸಮಿತಿಗೆ ಸೂಕ್ತವೆನಿಸುವ ಅಂದಿನ ಘಟನೆಗೆ ಸಂಬಂಧಿಸಿದ ಹಾಗೂ ಘಟನೆ ನಡೆದ ದಿನಾಂಕದಿಂದ ಸಮಿತಿ ರಚನೆ ಆಗುವವರೆಗೆ ಪೀಠ ಮತ್ತು ಸದನದ ಗೌರವಕ್ಕೆ ಚ್ಯುತಿ ತರುವಂತಹ ಇತರೆ ಪೂರಕ ಅಂಶಗಳ ಬಗ್ಗೆ ಪರಿಶೀಲಿಸುವುದು.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ**

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ,**

**www.kla.kar.nic.in/council/council.htm**